ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 187/2023

| ಫಿರ್ಯಾದಿ | | ಆರೋಪಿ |
|---|---|---|
| ಶ್ರೀರಾಮ ಟ್ರಾನ್ಸಪೋರ್ಟ ಪೈನಾನ್ಸ ಕಂ. ಲಿ. ಶಾಖೆ ಕುಮಟಾ. | ವಿರುದ್ಧ | ಶ್ರೀ ರವಿಕಿರಣ ಮೋಹನ ನಾಯ್ಕ |

ಆರೋಪಿಃ

ಶ್ರೀ ರವಿಕಿರಣ ಮೋಹನ ನಾಯ್ಕ,
34 ವರ್ಷ, ಉ: ವ್ಯಾಪಾರ, ಸಾಃ ತದಡಿ, ಗೋಕರ್ಣ,
ಕುಮಟಾ.

– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –

ನೀವು ದಿಃ 07-02-2019 ರಂದು ವಾಹನ ಸಂಖ್ಯೆ ಕೆಎ 47-5374 ನ್ನು ಖರೀದಿ ಮಾಡಲು ಫಿರ್ಯಾದುದಾರರ ಸಂಸ್ಥೆಯಿಂದ 5,04,000/- ರೂಪಾಯಿ ಸಾಲವನ್ನು ಪಡೆದಿದ್ದು , ಸದರಿ ಸಾಲವನ್ನು ತೀರಿಸುವ ಸಲುವಾಗಿ ನೀವು ಫಿರ್ಯಾದುದಾರರಿಗೆ ದಿಃ 14-10-2021 ರ ನಿಮ್ಮ ಖಾತೆ ಇರುವ ಎಕ್ಸಿಸ್ ಬ್ಯಾಂಕ್ , ಕುಮಟಾ ಶಾಖೆಯ ಚೆಕ್ ನಂ. 018449 ನ್ನು ರೂ. 5,04,000/- ಕ್ಕೆ ನೀಡಿದ್ದು, ಸದರಿ ಚೆಕ್ ನ್ನು ನಗದೀಕರಿಸಲು ಕುಮಟಾ ಶಾಖೆಯ ಎಚ್ ಡಿ ಎಫ್ ಸಿ ಬ್ಯಾಂಕ್ ಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ 21-10-2021 ರಂದು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 16-11-2021 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು , ಸಧ್ರಿ ನೋಟಿಸು ನಿಮಗೆ ದಿಃ 22-11-2021 ರಂದು ಜಾರಿಯಾಗಿದ್ದು , ಸದರಿ ನೋಟಿಸು ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ಹೇಳಿರುವ ಹಣವನ್ನು ಪಿರ್ಯಾದುದಾರರಿಗೆ ನೀಡದೇ ನೇಗೋಷಿಯೆಬಲ್ ಇನ್ಸುಟ್ರುಮೆಂಟ್ ಕಾಯ್ದೆ ಕಲಂ 138 ಎನ್ ಐ ಆಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1 ನಿಮ್ಮ ಮೇಲೆ** ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ – ತಿಳಿಯಿತು

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 06-11-2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ